ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಕಡತ ಸಂ:ಸಿಪಿಇ(2)/ಪಾದರಕ್ಷೆ (ಷೂ)-02/2017-18 ದಿನಾಂಕ:26.06.2018

**- ಸುತ್ತೋಲೆ -**

ವಿಷಯ:- 2018-19ನೇ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಷೂ ಮತ್ತು ಸಾಕ್ಸ್ ವಿತರಿಸುವ ಬಗ್ಗೆ.

ಉಲ್ಲೇಖ:- 1. ಷೂ ಮತ್ತು ಸಾಕ್ಸ್ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಯೋಯೋಕ 2018 ದಿನಾಂಕ:26-03-2018

2. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿಪಿಇ(2)/ಪಾದರಕ್ಷೆ (ಷೂ)-02/2017-18 ದಿನಾಂಕ: 14-05-2018

2018-19ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿ ಶಿಕ್ಷಣ ಇಲಾಖೆಯ ವತಿಯಿಂದ ನಡೆಸಲ್ಪಡುವ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡಲಿರುವ ಅಂದಾಜು 44.57 ಲಕ್ಷ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಉಚಿತವಾಗಿ ಒಂದು ಜೊತೆ ಷೂ ಮತ್ತು ಎರಡು ಜೊತೆ ಸಾಕ್ಸ್‌ಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮುಖಾಂತರ ವಿತರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿದೆ.

ಅದರಂತೆ ಈಗಾಗಲೇ 42291 ಶಾಲೆಗಳ ಖಾತೆಗಳಿಗೆ ರೂ.115.00 ಕೋಟಿಗಳನ್ನು ಜಮೆ ಮಾಡಲಾಗಿದ್ದು ಜಮೆ ಮಾಡಿದ ವಿವರವನ್ನು SHOE AND SOCKS FUND RELEASE ಎಂಬ ಶೀರ್ಷಿಕೆಯಲ್ಲಿ SCHOOL EDUCATION WEBSITEನಲ್ಲಿ ತಮ್ಮ ಮಾಹಿತಿಗಾಗಿ ಒದಗಿಸಲಾಗಿದೆ ಹಾಗೂ ಎಲ್ಲಾ ಉಪನಿರ್ದೇಶಕರುಗಳಿಗೆ ಈ ಮೇಲ್ ಮುಖಾಂತರ ಕಳುಹಿಸಲಾಗಿದೆ.

ಉಲ್ಲೇಖಿತ (2)ರ ನಮ್ಮ ಕಛೇರಿ ಸುತ್ತೋಲೆಯಲ್ಲಿ ತಿಳಿಸಿರುವ ಷರತ್ತುಗಳನ್ವಯ ಕೂಡಲೇ ಖರೀದಿ ಪ್ರಕ್ರಿಯೆ ಪ್ರಾರಂಭಿಸಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್ ವಿತರಿಸಲು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಶಾಲೆಗಳಿಗೆ ಈ ಮಾಹಿತಿಯನ್ನು ತಿಳಿಸಿ ಸೂಕ್ತ ಮೇಲ್ವಿಚಾರಣೆಯನ್ನು ಮಾಡಲು ತಿಳಿಸುತ್ತಾ ದಿನಾಂಕ:15-07-2018ರ ಒಳಗಾಗಿ ಈ ಪ್ರಕ್ರಿಯೆ ಮುಗಿಸಿ, ಉಳಿಕೆ/ಕೊರತೆಯನ್ನು ತಾಲ್ಲೂಕು ಹಂತದಲ್ಲಿ ಸರಿಪಡಿಸಿಕೊಂಡು ತದನಂತರ ಜಿಲ್ಲಾ ಹಂತದಲ್ಲಿ ಸರಿದೂಗಿಸಿಕೊಳ್ಳುವುದು. ಇದಾದ ನಂತರವೂ ಜಿಲ್ಲೆಯಲ್ಲಿ ಕೊರತೆಯಾದ ಅನುದಾನದ ವಿವರವನ್ನು ಈ ಪತ್ರಕ್ಕೆ ಲಗತ್ತಿಸಿರುವ **ನಮೂನೆ-1ರಲ್ಲಿ ವಲಯ ಹಂತದಲ್ಲಿ ಕ್ರೋಢೀಕರಿಸಿ ಜಿಲ್ಲಾ ಹಂತಕ್ಕೆ ನೀಡುವುದು. ನಂತರ ನಮೂನೆ-2ರಲ್ಲಿ ಜಿಲ್ಲಾ ಹಂತದಲ್ಲಿ ಕ್ರೋಢೀಕರಣ ಮಾಡಿ ಈ ಕಛೇರಿಗೆ ಸಲ್ಲಿಸುವುದು.** ದಿನಾಂಕ:30-07-2018ರ ಒಳಗಾಗಿ ಈ ಕಛೇರಿಗೆ ಹಾರ್ಡ ಮತ್ತು ಸಾಫ್ಟ್ ಪ್ರತಿಗಳಲ್ಲಿ ನೀಡಲು ತಿಳಿಸಿದೆ. ಜಿಲ್ಲೆಯಲ್ಲಿ ಸರಿದೂಗಿಸಿಕೊಂಡ ಬಳಿಕ ಅನುದಾನ ಉಳಿಕೆಯಾದಲ್ಲಿ ಕಡ್ಡಾಯವಾಗಿ ವರದಿಯನ್ನು ಈ ಕಛೇರಿಗೆ ನೀಡುವುದು.

ಶೂ ಮತ್ತು ಸಾಕ್ಸ್ ಖರೀದಿ ಪ್ರಕ್ರಿಯೆಗೆ 1 ಲಕ್ಷ ಮೀರುವಂತಹ ಶಾಲೆಗಳಿಗೆ 4(ಜಿ) ಅಡಿಯಲ್ಲಿ ವಿನಾಯಿತಿ ದೊರೆತಿದ್ದು, ಅಂತಹ ಶಾಲೆಗಳೂ ಸಹ ಕೊಟೇಶನ್ ಮೂಲಕ ಖರೀದಿ ಪ್ರಕ್ರಿಯೆಯನ್ನು ನಿರ್ವಹಿಸುವುದು.ಖರೀದಿ ಮಾಡುವಂತಹ ಸಂಸ್ಥೆಯು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೊಂದಾಣಿಯಾಗಿರಬೇಕು ಹಾಗೂ ಜಿ.ಎಸ್.ಟಿ/ಟಿನ್ ಸಂಖ್ಯೆ ಹೊಂದಿರಬೇಕು ಹಾಗೂ 4(ಜಿ) ವಿನಾಯಿತಿಯ ಆದೇಶದ ಪ್ರತಿಯನ್ನು ಅನುಬಂಧಿಸಿದೆ.

(ಬಿ.ಕೆ.ಬಸವರಾಜ)
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಗೆ.

1. ರಾಜ್ಯದಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸುತ್ತಾ ಸೂಕ್ತ ಮೇಲ್ವಿಚಾರಣೆ ನಡೆಸಲು ತಿಳಿಸಿದೆ.**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗ ವಿಭಾಗ.
2. ಅಪರ ನಿರ್ದೇಶಕರು(ಆಡಳಿತ), ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ. ಬೆಂಗಳೂರು ಇವರ ಮಾಹಿತಿಗಾಗಿ
3. ಎಲ್ಲಾ ವಿಭಾಗೀಯ ಸಹ ನಿರ್ದೇಶಕರು ಸಾ.ಶಿ.ಇಲಾಖೆ.
4. ಕಛೇರಿ ಪ್ರತಿ

Scanned by CamScanner

## ನಮೂನೆ-1

ವಲಯದಿಂದ ಜಿಲ್ಲಾ ಹಂತಕ್ಕೆ 2018-19 ನೇ ಸಾಲಿನ ಶೂ ಮತ್ತು ಸಾಕ್ಸ್ ಖರೀದಿ ನಂತರ ಒದಗಿಸಬೇಕಾದ ಮಾಹಿತಿ

| ಕ್ರ.ಸಂ. | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಶಾಲೆಯ ಡೈಸ್ ಕೋಡ್ | ಶಾಲೆಯ ಹೆಸರು | ಬಿಡುಗಡೆಯಾದ ಅನುದಾನ | ಪ್ರಸ್ತುತ ಧಾಖಲಾಗಿರುವ ಮಕ್ಕಳ ಸಂಖ್ಯೆ | | | ಧಾಖಲಾತಿಯ ಅನುಸಾರ ಖರ್ಚಾದ ಮೊತ್ತ | ಉಳಿಕೆ | ಕೊರತೆ ಇದ್ದಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಬಿಡುಗಡೆಯಾಗಬೇಕಿರುವ ಒಟ್ಟು ಅನುದಾನ | | | ಒಟ್ಟು ಉಳಿಕೆ ಮೊತ್ತ | ಒಟ್ಟು ಕೊರತೆ ಮೊತ್ತ |
|---|---|---|---|---|---|---|---|---|---|---|---|---|---|---|---|
| | | | | | | 1 ರಿಂದ 5 | 6 ರಿಂದ 8 | 9 ರಿಂದ 10 | | | 1 ರಿಂದ 5 | 6 ರಿಂದ 8 | 9 ರಿಂದ 10 | | |
| 1 | | | | | | | | | | | | | | | |
| 2 | | | | | | | | | | | | | | | |
| 3 | | | | | | | | | | | | | | | |
| 4 | | | | | | | | | | | | | | | |
| 5 | | | | | | | | | | | | | | | |
| | ಒಟ್ಟು | | | | | | | | | | | | | | |

ಸೂಚನೆ= ಸದರಿ ಮೇಲ್ಕಂಡ ನಮೂನೆ-1 ರಲ್ಲಿ ವಲಯ ಹಂತದಿಂದ ಪಡೆದು ಜಿಲ್ಲಾ ಉಪನಿರ್ದೇಶಕರು ಕ್ರೋಢೀಕೃತ ಮಾಹಿತಿಯನ್ನು ನಮೂನೆ-2 ರಲ್ಲಿ ಆಯುಕ್ತರ ಕಛೇರಿಗೆ ನೀಡುವುದು.

## ನಮೂನೆ-2

ಜಿಲ್ಲಾ ಹಂತದಿಂದ ರಾಜ್ಯ ಕಛೇರಿಗೆ 2018-19 ನೇ ಸಾಲಿನ ಶೂ ಮತ್ತು ಸಾಕ್ಸ್ ಖರೀದಿ ನಂತರ ಒದಗಿಸಬೇಕಾದ ಮಾಹಿತಿ

| ಕ್ರ.ಸಂ. | ಜಿಲ್ಲೆಯ ಹೆಸರು | ವಲಯಗಳ ಹೆಸರು | ಒಟ್ಟು ಶಾಲೆಗಳ ಸಂಖ್ಯೆ | ಬಿಡುಗಡೆಯಾದ ಅನುದಾನ | ವಲಯಗಳಲ್ಲಿ ಧಾಖಲಾಗಿರುವ ಮಕ್ಕಳ ಸಂಖ್ಯೆ | | | ವಲಯದಲ್ಲಿ ಖರ್ಚಾದ ಒಟ್ಟು ಮೊತ್ತ | ವಲಯದಲ್ಲಿ ಸರಿದೂಗಿಸಿಕೊಂಡು ಉಳಿಕೆಯಾದ ಒಟ್ಟು ಮೊತ್ತ | ವಲಯಗಳಲ್ಲಿ ಕೊರತೆಯಾದ ಒಟ್ಟು ಮೊತ್ತ (ಇದ್ದಲ್ಲಿ) |
|---|---|---|---|---|---|---|---|---|---|---|
| | | | | | 1 ರಿಂದ 5 | 6 ರಿಂದ 8 | 9 ರಿಂದ 10 | | | |
| 1 | | | | | | | | | | |
| 2 | | | | | | | | | | |
| 3 | | | | | | | | | | |
| 4 | | | | | | | | | | |
| 5 | | | | | | | | | | |
| | ಒಟ್ಟು | | | | | | | | | |

ಸೂಚನೆ= ತಾಲ್ಲೂಕು ಹಂತದಲ್ಲಿ ಉಳಿಕೆ ಕೊರತೆ ಸರಿದೂಗಿಸಿಕೊಂಡು ನಂತರ ಜಿಲ್ಲಾ ಹಂತದಲ್ಲಿ ಸರಿದೂಗಿಸಿಕೊಂಡು ಜಿಲ್ಲೆಯ ಒಟ್ಟು ಉಳಿಕೆ/ಕೊರತೆಯ ಮಾಹಿತಿಯನ್ನು ಕ್ರೂಢೀಕರಿಸಿ ಈ ಕಛೇರಿಗೆ ಸಲ್ಲಿಸುವುದು

Scanned by CamScanner